ಸದಸ್ಯರ ಬಗ್ಗೆ ಒಳ್ಳೆಯ ಭಾವನೆ ಇದೆ. ಮೊನ್ನೆ ನಾನು ಬಸವಕಲ್ಯಾಣಕ್ಕೆ ಹೋಗಿದ್ದಾಗ ಅಲ್ಲಿ ಸತ್ಯಾಗ್ರಹ ಕುಳಿತಿದ್ದರು, ಬೀದರ್‌ನಲ್ಲೂ ಕೂಡ ಸತ್ಯಾಗ್ರಹ ಕುಳಿತಿದ್ದಾರೆ. ಆದುದರಿಂದ, ದಯಮಾಡಿ ಇದರ ಬಗ್ಗೆ ತಾವು ಒಂದು ನಿರ್ದಿಷ್ಟವಾದಂಥ ಒಂದು ಸ್ಪಷ್ಟವಾದ ಧೋರಣೆ ತಾವು ಹೇಳಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

(ಅಧ್ಯಕ್ಷರ ಪೀಠವನ್ನು ಉಪಾಧ್ಯಕ್ಷಿಣಿಯವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಅಲಂಕರಿಸಿದರು)

ಶ್ರೀ ಬಿ. ಶಿವಣ್ಣ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ದೀರ್ಘವಾಗಿ ಡಿಸ್‌ಕಸ್ ಮಾಡಿದ್ದೇವೆ. ಸಾಕಷ್ಟು ಮೀಟಿಂಗ್ಸ್ ಮಾಡಿದ್ದೇವೆ.? ಇದು ಗೌರ್ನಮೆಂಟ್ ಆಫ್ ಇಂಡಿಯಾಗೆ ಬಿಟ್ಟಂಥ ವಿಷಯವೆಂದು ಆಗಲೇ ನಾನು ಹೇಳಿದ್ದೇನೆ. ಆದರೆ, ಗೌರ್ನಮೆಂಟ್ ಆಫ್ ಇಂಡಿಯಾದ ಮೇಲೆ ಸಾಕಷ್ಟು ಒತ್ತಡ ತಂದು ಅನಂತರ ಅವರು ಒಪ್ಪದಿದ್ದರೆ, ಕರ್ನಾಟಕ ಸರ್ಕಾರವೇ ಸಹಾಯ ಮಾಡಲಿಕ್ಕೆ ತಯಾರಾಗಿದೆ. ಈಗ ನೀವು ಹೇಳಿದಂಥ ವಿಷಯಗಳು ಕೇಂದ್ರಕ್ಕೆ ಬಿಟ್ಟಂಥ ಕಾರಣ ನಮಗೆ ಅದನ್ನು ಮಾಡುವುದಕ್ಕಾಗುವುದಿಲ್ಲ.

ಶ್ರೀಮತಿ ರೇಣುಕಾ ರಾಜೇಂದ್ರನ್ : ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ, ಕೇಂದ್ರ ಸರ್ಕಾರಕ್ಕೆ ತಾವು ಒತ್ತಾಯ ಏಕೆ ತರಬಾರದು ? ಒತ್ತಾಯ ತರುತ್ತೇವೆಂದು ಈಗಷ್ಟೇ ಘನ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ. ನಾವು ಯಾವ ರೀತಿ ಸಹಾಯ ಮಾಡಲಿಕ್ಕೆ ಸಾಧ್ಯವೋ ಆ ಸಹಾಯ ಮಾಡುತ್ತೇವೆ ಎನ್ನತಕ್ಕಂಥ ವಚನ ಕೊಟ್ಟಿದ್ದೀರಿ. ನಾನು ಈ ಸಂದರ್ಭದಲ್ಲಿ ಅವರನ್ನು ಕೇಳತಕ್ಕಂಥಾದ್ದು ಇಷ್ಟೇ. 50 ಪರ್ಸೆಂಟ್ ಕೇಂದ್ರ ಸರ್ಕಾರದಿಂದ ಮತ್ತು 50 ಪರ್ಸೆಂಟ್ ನಮ್ಮ ರಾಜ್ಯ ಸರ್ಕಾರದಿಂದ ಹಣವನ್ನು ಹಾಕಿ, ಎರಡನ್ನು ಮ್ಯಾಚ್ ಮಾಡಿ, ಅವರಿಗೆ ವೇತನವನ್ನು ಪರಿಷ್ಕರಿಸಿದರೆ ಒಳ್ಳೆಯದು. ಈ ಒಂದು ಸಲಹೆಯನ್ನು ಮಾಡಲಿಕ್ಕೆ ನಾನು ಇಚ್ಛಿಸುತ್ತೇನೆ. ಈ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೆಂದು ಕೇಳಬಯಸುತ್ತೇನೆ.

ಶ್ರೀ ಬಿ. ಶಿವಣ್ಣ : ಮಾನ್ಯ ಅಧ್ಯಕ್ಷಿಣಿಯವರೇ, ಸಲಹೆಯೇನೋ ಒಳ್ಳೆಯದು. ಕೇಂದ್ರ ಸರ್ಕಾರಕ್ಕೆ ನಾವು ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅವಿಶ್ವಾಸ ನಿರ್ಣಯದ ಮೇಲೆ ಮುಖ್ಯಮಂತ್ರಿಯವರು ಮಾಡಿದ ಹೇಳಿಕೆಯಲ್ಲಿ ಆಗಿರುವ ಕೆಲವು ತಪ್ಪುಗಳನ್ನು ಸರಿಪಡಿಸಿ ಸ್ಪಷ್ಟೀಕರಿಸಿರುವುದು.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ತಮ್ಮ ಅನುಮತಿಯನ್ನು ಪಡೆದು ಮೊನ್ನೆ ನಾನು ಅವಿಶ್ವಾಸ ನಿರ್ಣಯದ ಮೇಲೆ ಉತ್ತರವನ್ನು ಕೊಡುತ್ತಿದ್ದ ಕಾಲದಲ್ಲಿ ಒಂದೆರಡು ಸಣ್ಣ ಸಣ್ಣ ತಪ್ಪುಗಳಾಗಿದೆ, ಅದು ರೆಕಾರ್ಡ್‌ನಲ್ಲಿ ಉಳಿಯಬಾರದು ಆ ಉದ್ದೇಶದಿಂದ ಈ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ. The Bangalore Urban District Excise auction ವಿಚಾರದಲ್ಲಿ by oversight it has been mentioned by me, while replying to the debate that the difference between first round of auction and the second round of action is Rs. 1000 for the year 1991-92 instead of 1 percent ಎಂದು ಇಟ್ಟುಕೊಳ್ಳಬೇಕು. ಏಕೆಂದರೆ ಅದು 4 ಲಕ್ಷ ವ್ಯತ್ಯಾಸ ಬರುತ್ತದೆ ಅದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. Second point, replying to the no confidence motion, the total production of molasses in the State is 7,80,000 metric tons and out of this 5,10,000 metric tons would be utilised and the balance is surplus. The above

projections for next couple of years and not the present position ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. The above figures are for the future and unless distilleries are able to achieve this surplus of 2,70,000 metric tons, either that has to be exported or wasted. To utilise that difference the distillery licences are issued. ಅದು ಫ್ಯೂಚರ್ ಪ್ಲಾನಿಂಗ್, ಹೆಚ್ಚು ರೆವಿನ್ಯೂ ಬರುತ್ತದೆ ಎನ್ನುವ ದೃಷ್ಟಿಯಿಂದ ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ, ರೆಡಿಯಾಗಿ ನಾವು ಇರಬೇಕಾಗುತ್ತದೆ. ಇಲ್ಲದಿದ್ದರೆ ರೆವಿನ್ಯೂ ಹೋಗುತ್ತದೆ.

Third matter is in respect of Mohan Meakins Ltd.,

ಶ್ರೀಮಾನ್ ಯಡಿಯೂರಪ್ಪನವರು ಎತ್ತಿದ ಒಂದು ವಿಚಾರದಲ್ಲಿ ತಪ್ಪಾಗಿದೆ. ತಾವು ಸಿಕ್ಕಿದಾಗ ನಾನು ಅದನ್ನು ಹೇಳಿದ್ದೆ. ಆ ವಿಷಯದ ಬಗ್ಗೆ ವಿವರಣೆಯನ್ನು ಸಂಪೂರ್ಣವಾಗಿ ಕೊಡಲು ಆಗಲಿಲ್ಲ. ಏಕೆಂದರೆ 4 ಗಂಟೆಯವರೆಗೆ ಉತ್ತರ ಸಾಗಿತ್ತು.

After the Government issued order bearig No.HUD 411 MNX 88 dated 27.12.90, holding the acquisition of land by BDA in respect of 11 Acres and 16 gantas of land owned by M/s Mohan Meakins Ltd., and Mysore Food Products Limited. the allottees of sites, who had been allotted sites by the BDA in the above land, had filed a contempt of court case bearing No. 126 and 127/91 against the Secretary to Government, Housing and Urban Development Dept and others. The Hon'ble High Court has dismisse this contempt of court case summarily as without having any basis.

Thereafter, the above allottees of sites have filed Writ Petitions No. 5490 to 5494/91, about which I have referred to in my speech, while reply to the 'Motion of No Confidence" against my Government. On 1.3.91 in Karnataka High Court, the Karnataka High Court has admitted this W.P. but has declined to give the "stay order as prayed for by the allottees of the sites. Thus, it is prima facie clear that the High Court is not convinced about the merits of their case. I have referred to this preliminary decision of the Hon'ble High Court. Hence, I clarify that the High Court has not given any direction to Government, but has declined to stay the Government's order in favour of the allottees of the sites, who have been allotted sites on the land in question. Even if there is any stay order, Government has not yet received such stay order.

Regarding the order of the High Court in W.P. No. 7239/83 dt. 5.4.83 and Writ Appeal No.2159/86 dated 27.8.86, it is clarified that it is the land owner ie. M/s Mohan Meakins Ltd. etc. who had gone to the High Court (and not the BDA or the allottees of the sites in question) challenging the acquisition proceedings initiated by the BDA. Similarly, it is the land owners

i.e. Mohan Meakins etc. who had gone on appeal to the Supreme Court, which is related to the Supreme Court order dtd. 29.4.87 in petition No. 2833/86. These orders of the High Court and Supreme Court do not confer any rights to the allottees of the sites. These orders merely say that the land acquisition proceedings initiated by the BDA are valid.

It is further clarified that the Government vide its order no. HUD 411 MNX 88 dt. 27.12.90 have not denotified or reconveyed the lands in question in favour Mohan Meakins & Mysore Food Products Ltd. as alleged by Sri Yediyurappa. On the other hand, the Government have merely held that the entire scheme and the subsequent land acquisition proceedings of the BDA are illegal and vodi, as the BDA has tried to acquire an industrial land for residential purpose on which a thriving "100% export oriented" industrial unit is existing and which has now employed 600 workers, in flagrant violation of the zoning regulations enforced in that area since 1960. It is clarified that the BDA or its predecessor CITB had no power under the Karnataka Town & Country Planning Act 1961 to change the Character of a land once it has been fixed at the time of introduction of O.D.P. (Outline Development Plan or C.D.P. Cc nprehensive Development Plan). In fact there was no provision for change of land use till the amendments were introduced in the K.T.C.P. Act recently.

As could be seen from the above, this case is now pending before the High Court. It is just for the information of the Hon'ble Member Sri Yediyurappa and this House.

2.15 ಪಿ.ಎಂ.,

ಶ್ರೀ ಬಿ.ಎನ್. ಯಡಿಯೂರಪ್ಪ : ಸನ್ಮಾನ್ಯ ಉಪಸಭಾಧ್ಯಕ್ಷಿಣಿಯವರೆ, ಇಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಮೇಲೆ ಪ್ರಿವಿಲೈಜ್ ಮೋಷನ್ ಮಾಡಿ ದೊಡ್ಡಸ್ಥಿಕೆ ಮಾಡಿ ನಾನೇನು ಪತ್ರಿಕೆಯಲ್ಲಿ ಬರಬೇಕು ಎನ್ನುವ ಚಟ ನನಗಿಲ್ಲ. ನಾನು ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ತಾವು ಏನು ಕಳುಹಿಸಿದ್ದೀರೋ ಅದು ಏನೋ ನನಗೆ ಗೊತ್ತಿಲ್ಲ, ಆದರೆ ನಾನು ಉತ್ತರ ಕೊಡಬೇಕಾದರೆ I should be staight on records ಅದು ಸರಿಯಿರಬೇಕು. ನಾಳೆ ಸದನಕ್ಕೆ ತಪ್ಪು ಮಾಹಿತಿ ಇರಬಾರದು ಎನ್ನುವ ದೃಷ್ಟಿಯಿಂದ ನಾನು ನನ್ನ ಕರ್ತವ್ಯವನ್ನು ಮಾಡಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ತಮ್ಮ ಗಮನಕ್ಕೆ ಅಧ್ಯಕ್ಷರ ಮೂಲಕ ತರುವಂಥ ಪ್ರಯತ್ನ ಏನು ಮಾಡುತ್ತಿದ್ದೇನೆಂದರೆ, ತಾವು ಅವಿಶ್ವಾಸ ನಿರ್ಣಯಕ್ಕೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದೀರಿ.

ಶ್ರೀ ಎಸ್. ಬಂಗಾರಪ್ಪ : ಸನ್ಮಾನ್ಯ ಅಧ್ಯಕ್ಷರೇ ನಾನು ಅದನ್ನು ತರಿಸಿಕೊಡುತ್ತೇನೆ. ಇನ್ನು ಮೋಹನ್ ಮೆಕೆನ್ಸ್ ವಿಚಾರ there has been a judgement of the High Court.. ಇವತ್ತು ಏನೇ ಮಾಡಿದರೂ ಹೈಕೋರ್ಟ್ ಡೈರೆಕ್ಷನ್ ಪ್ರಕಾರ ಮಾಡಿರತಕ್ಕದ್ದು.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನದು ಪ್ರಮುಖವಾದ ವಿಷಯ ಏನೆಂದರೆ, ಮೋಹನ್ ಮೇಕಿನ್ಸ್ ಅವರಿಗೆ ಡೀ ನೋಟಿಫೈ ಮಾಡುವ ಸಂದರ್ಭದಲ್ಲಿ ಜಮೀನು ಕೊಡುವಂಥ ಸಂದರ್ಭದಲ್ಲಿ ಅವರು ಹೈಕೋರ್ಟ್, ಸುಪ್ರೀಮ್ ಕೋರ್ಟಿಗೆ ಹೋದಾಗ ಅದನ್ನು ತಳ್ಳಿಹಾಕಲಾಯಿತು ಸುಪ್ರೀಮ್ ಕೋರ್ಟ್ ಯಾವುದೇ ಕಾರಣಕ್ಕೂ ಇದನ್ನು ಬೇರೆ ಡೀನೋಟಿಫೈ ಮಾಡದೆ ಯಾರಿಗೆ ಸೈಟು ಹಂಚಿದ್ದೇವೆ. ಅವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಕೊಡಬೇಕು ಎಂದು ಡೈರೆಕ್ಷನ್ ಕೊಟ್ಟಿತು. ಇಷ್ಟು ಆದಮೇಲೂ ಸಹ ನಿಮ್ಮ ಹೆಚ್‌ಯುಡಿ ಡಿಪಾರ್ಟ್‌ಮೆಂಟಿನವರು ಏಕಾವಿಕಿ. After all this, the Secretary to Government, Sri S.M. Patnaik, passes an order under Section 63 of BDA Act in one single sittiong for denotifying the lands in favour of M/s Mohan Meakins Vide order No. HUD 411 MNX 88 dated 27-12-90. ಇಲ್ಲಿ ಏನಿದೆ, ತಾವೇನು ಹೈಕೋರ್ಟ್‌ಗೆ ಹೋದಂಥ ಒಂದು ಕೇಸ್ ನಂಬರ್‌ನ ರೆಫರ್ ಮಾಡಿದಿರಿ. ಯಾರಿಗೆ ಸೈಟು ಕೊಟ್ಟಿದ್ದರು, ಮನೆ ಕಟ್ಟಲಿಕ್ಕೆ ಲೈಸೆನ್ಸ್ ಕೊಟ್ಟಿತ್ತು, ಅದಕ್ಕೋಸ್ಕರ ಅವರು ರಿಟ್ ಫಿಟೀಷನ್ ಹಾಕಿದ್ದಾರೆ, ರಿಟ್ ಪಿಟೀಷನ್ ನಂಬರ್ 5490 ಟು 5494 ಆಫ್ 1990-91 ಇದನ್ನು ರೆಫರ್ ಮಾಡಿ ಈ ಹೈಕೋರ್ಟ್ ಡೈರೆಕ್ಷನ್ಸ್ ಪ್ರಕಾರ ಡೀನೋಟಿಫೈ ಮಾಡಿದ್ದಾರೆಂದು ಹೇಳಿದ್ದರೆ ಇದು ಸತ್ಯಕ್ಕೆ ದೂರವಾದುದು. ಇದು ಅಗ್ರೀವ್ಡ್ ಪಾರ್ಟಿ ಹೈಕೋರ್ಟಿಗೆ ಹೋದಂತಾದ್ದು ಇದು ರೆಫರೆನ್ಸ್ ನಂಬರ್...

ಶ್ರೀ ಎಸ್. ಬಂಗಾರಪ್ಪ : ಈಗ ಸರಿಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗಲೂ ಸರಿಯಾಗಿಲ್ಲ. 1990ರ ಪ್ರಕಾರ ತಾವು ಏನು ಹೇಳಿದ್ದೀರಿ, 27-12-90 ತಾವು ಮಾಡಿರುವಂಥ ಲೆಟರ್ ಯಾವುದು ಅಂದರೆ, ನಂಬರ್ ಹೆಚ್‌ಯುಡಿ411 ಎಂಎನ್‌ಎಕ್ಸ್ 88 ತಾರೀಖು 27-12-90ರಲ್ಲಿ ತಾವು ಯಾವುದೇ ಒಂದು ಮಾತನ್ನು ಕೇಳದೆ ತಮ್ಮ ಹೆಚ್‌ಯುಡಿ, ಡಿಪಾರ್ಟ್‌ಮೆಂಟಿನವರು ಒಂದೇ ಬಾರಿಗೆ ಹೈಕೋರ್ಟ್, ಸುಪ್ರೀಂಕೋರ್ಟ್ ಡೈರೆಕ್ಷನ್‌ನ್ನು ಬದಿಗೊತ್ತಿ ಡೀನೋಟಿಫೈ ಮಾಡಿರುವಂಥ ಆರ್ಡರ್ ಡೇಟನ್ನ ನೀವು ರೆಫರ್ ಮಾಡಿದ್ದೀರಿ. ನಾನು ಅದಕ್ಕೋಸ್ಕರ ಅಧ್ಯಕ್ಷರ ಹತ್ತಿರ ಧಾವಿಸಿ ಹೋಗಿ ಆ ರೆಫರೆನ್ಸ್ ನಂಬರ್ ಕೊಟ್ಟಾಗ ಅಧ್ಯಕ್ಷರು ಮೊನಚಾದ ಮಾತು ಹೇಳಿದರು, ನಮಗೆ ಎಚ್ಚರಿಕೆ ಕೊಟ್ಟರು. ಅದಕ್ಕೋಸ್ಕರ ತಾವು ಬೇಕಾದರೆ, ಬೇರೆ ರೀತಿಯಿಂದ ಇದನ್ನ ಪ್ರಸ್ತಾಪ ಮಾಡಿ ಯಡಿಯೂರಪ್ಪನವರೆ, ತಾವು ಜವಬ್ದಾರಿ ಹೊತ್ತು ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ, ಬೇಕಾದರೆ ಪ್ರಿವಿಲೇಜ್ ಮೋಷನ್ ಮಾಡಿ ಎಂದು ಹೇಳಿದರು. ಅದಕ್ಕಾಗಿ ನಾನು ನಿಮ್ಮ ಹತ್ತಿರ ಕೇಳುತ್ತಿರುವುದು ಇಷ್ಟೆ, ಇವೊತ್ತು ತಾವು ಈ ಒಂದು ಮೋಹನ್ ಮೆಕೀನ್ಸ್‌ಗೆ ಜಮೀನನ್ನು ಡೀ ನೋಟಿಫೈ ಮಾಡಿ ಹೆಚ್‌ಯುಡಿ ಇಲಾಖೆ ಏಕಾವಿಕಿ ಆದೇಶ ಕೊಟ್ಟಿದೆ. ಹೈಕೋರ್ಟ್, ಸುಪ್ರೀಮ್ ಕೋರ್ಟ್ ಆದೇಶವನ್ನು ತಳ್ಳಿಹಾಕಿ ಕಾನೂನು ಬಾಹಿರವಾಗಿ ಹೆಚ್‌ಯುಡಿಗೆ ಅಧಿಕಾರ ಇಲ್ಲದೆ, ನೀವು ಜಮೀನನ್ನು ಡೀನೋಟಿಫೈ ಮಾಡಿದ್ದೀರೆಂದು ನನ್ನದು. ಅದಕ್ಕೋಸ್ಕರ ನಾನು ತಮ್ಮನ್ನು ಕೇಳುತ್ತಿರುವುದು ಈ ಡೀ-ನೋಟಿಫೈ ಮಾಡುವುದರ ಬಗ್ಗೆ ಈಗಲಾದರೂ ಕ್ಲಾರಿಫೈ ಮಾಡಿ ಈ ಸಭೆಗೆ

ಮತ್ತು ಈ ರಾಜ್ಯದ ಜನಕ್ಕೆ ಈ ಡೀನೋಟಿಫೈ ಮಾಡಿರುವುದಕ್ಕೆ ಆಧಾರ ಏನು ಎಂದು ತಿಳಿಸಬೇಕು.

ಹೈಕೋರ್ಟ್, ಸುಪ್ರೀಮ್ ಕೋರ್ಟ್‌ಗೆ ಹೋದಾಗ ನಿಮ್ಮ ಸರ್ಕಾರ ಹೆಚ್‌ಯುಡಿ ಡಿಪಾರ್ಟ್‌ಮೆಂಟ್ ಬಿಡಿಎ ಈ ಒಂದು ಮೋಹನ್ ಮೆಕೀನ್ಸ್ ವಿರುದ್ಧ ನಾವು ಅಕ್ವೈರ್ ಮಾಡಿಕೊಂಡಿರುವಂತಾದ್ದು ನೋಟಿಫೈ ಮಾಡಿರುವಂತಾದ್ದು ಸರಿ ಇದೆ ಎಂದು ವಾದ ಮಾಡಿಕೊಂಡು ಬಂದಂತವರು ಕಡೇಗಳಿಗೆಯಲ್ಲಿ ಮೊನ್ನೆ ಈ ರೀತಿ ಒಂದು ಆದೇಶ ಹೊರಡಿಸಿ ಈ ಒಬ್ಬ ಮೋಹನ್ ಮೆಕೀನ್ಸ್ ಅಂತ ದೊಡ್ಡ ಕೋಟ್ಯಾಧಿಪತಿಗೆ ಅನುಕೂಲ ಮಾಡಿಕೊಡಲಿಕ್ಕೆ ಹೈಕೋರ್ಟ್, ಸುಪ್ರೀಮ್ ಕೋರ್ಟ್ ಆದೇಶ ಮೀರಿ ನಡೆದಿದ್ದೀರಾ, ಜನತೆಗೆ ಅನ್ಯಾಯ ಮಾಡಿದ್ದೀರಾ ಎನ್ನುವುದು ನಮ್ಮ ನೇರವಾದ ಆರೋಪ. ಈಗ ನಾನು ನಿಮ್ಮನ್ನು ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ. ಈ ರೀತಿ ಬಿಡಿಎಗೆ ಡೈರೆಕ್ಷನ್ಸ್ ತಾವು ಏನು ಹೆಚ್‌ಯುಡಿ ಯಿಂದ ಕೊಡಿಸಿದಿರಿ, ಆದೇಶ ಕೊಡಿಸಿದಿರಿ ಇದರ ಬಗ್ಗೆ ತಮ್ಮ ಅಭಿಪ್ರಾಯ ಏನು? ತಾವು ಡೈರೆಕ್ಷನ್ಸ್ ನೇರವಾಗಿ ಹೈಕೋರ್ಟ್, ಸುಪ್ರೀಮ್ ಕೋರ್ಟ್ ಆದೇಶ ಮೀರಿ ಕೊಟ್ಟಿದ್ದೀರೋ ಇಲ್ಲವೋ. ಹೈಕೋರ್ಟ್ ಆದೇಶ ಪ್ರಕಾರ ಕೊಟ್ಟಿದ್ದಾರೆ. ಇದನ್ನು ಈ ರಾಜ್ಯದ ಜನತೆಗೆ ಕೊಡಬೇಕು ಎನ್ನುವುದು ಒಂದು. ಇದರಲ್ಲಿ ಇನ್ನೊಂದು ಸನ್ಯಾಸ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ನನ್ನ ಉದ್ದೇಶ ಏನೆಂದರೆ, ಇವೊತ್ತು ಸದನದ ನಾಯಕರು. ಉತ್ತರ ಕೊಡಬೇಕಾದರೆ ಅಧಿಕಾರಿಗಳು ಕೆಲವು ತಪ್ಪು ಮಾಹಿತಿ ಕೊಟ್ಟಿದ್ದಾರೆ. ಅದೇ ದೊಡ್ಡ ಅಪರಾಧ ಎನ್ನುವುದಿಲ್ಲ. ಆದರೆ, ಇಷ್ಟೊಂದು ಪ್ರಮುಖವಾದಂಥ ಸಂಗತಿ ಮೋಹನ್ ಮೆಕೀನ್ಸ್ , ಬಗ್ಗೆ ಪತ್ರಿಕೆಯಲ್ಲಿ ಮುಖಪುಟದಲ್ಲಿ ಬಂದಮೇಲೂ ಸಹ ಬಹುಶಃ ಬಿಜೆಪಿ ಶಾಸಕರು ಈ ರೀತಿ ಏನಾದರೂ ಪ್ರಮುಖವಾದ ವಿಷಯವನ್ನು ಪ್ರಸ್ತಾಪಮಾಡಿದಾಗ ಅದನ್ನು ಸರಿಯಾದ ರೀತಿಯಲ್ಲಿ ಗಣನೆಗೆ ತೆಗೆದುಕೊಳ್ಳದೆ ಹಗುರವಾಗಿ ತೆಗೆದುಕೊಂಡಿದ್ದರ ಪರಿಣಾಮ ಈ ರೀತಿ ಆಯಿತೋ ಏನೋ ಎನ್ನುವಂತಾದ್ದು ಆರೀತಿ ಇದ್ದರೆ ಅದನ್ನು ಮುಂದೆ ನೋಡೋಣ. ಇದರ ಜೊತೆ ತಾವು ಇನ್ನೊಂದು ಏನು ಮಾಡಿದ್ದೀರಿ ತಾವು ಅದೇ ದಿವಸ ಉತ್ತರ ಕೊಡುವಂಥ ಸಮಯದಲ್ಲಿ ಇನ್ನೊಂದು ಏನು ಹೇಳಿದ್ದೀರಿ, ತಮ್ಮ ಹತ್ತಿರ ಪ್ರಿವಿಲೇಜ್ ಮೂವ್ ಮಾಡುವುದಕ್ಕಿಂಥ ಮುಂಚೆ ತಾವು ಇದರ ಬಗ್ಗೆಯೇ ಒಂದು ಕ್ಲಾರಿಫೈ ಮಾಡುವುದು ಇದ್ದರೆ ಮಾಡಿ ಇಲ್ಲದಿದ್ದರೆ ತಮ್ಮ ಇಷ್ಟ, ಈಗ ತಾವು ಏನು ಹೇಳಿದ್ದೀರಿ ಯಾವುದೇ ಸಂದರ್ಭದಲ್ಲಿ ಹೆಚ್‌ಯುಡಿ ಸೆಕ್ರೆಟರಿಯವರು, he has not at all asked the BDA to give favourable reply..

ನಾನು ನಿಮ್ಮ ಅಲಿಗೇಷನ್ಸ್ ರೆಫ್ಯೂಸ್ ಮಾಡುತ್ತಿದ್ದೇನೆ. ಆಮೇಲೆ ಇದರಲ್ಲಿ ಏನು ಮಾಡಿದರೂ ಕೂಡ ಕೋರ್ಟ್ ಆರ್ಡರ್ ಇದೆ. ದಯಮಾಡಿ ಇದನ್ನು ಮರೆಯಬಾರದು. ತಾವು ಹಿಂದಿನ ವಿಷಯಕ್ಕೆ ತಾರೀಖು ಕೇಳುತ್ತಿದ್ದೀರಿ, ಗೌರ್ಮೆಂಟ್ ಲೆಟರ್ ನಂಬರ್ ತಾರೀಖು 16-6-1986ಎಂದು ಮತ್ತೆ ಮುಂದುವರೆದು ಮಾತನಾಡಿದ್ದೀರಿ. ನಾನು ಆದಕ್ಕೆ ನಿಮಗೆ ನೇರವಾಗಿ ಪ್ರಸ್ತಾಪಮಾಡಿದೆ, ಸುಮಾರು 10 ಜನ ಇಂಡಿವಿಜ್ಯುಯಲ್ಸ್‌ಗೆ ಹಿಂದಿನ ರಾಮಕೃಷ್ಣ ಹೆಗಡೆಯವರ ಸರ್ಕಾರ ಡೀ ನೋಟಿಫೈ ಮಾಡಿತ್ತೋ ಅದನ್ನು ಮತ್ತೆ ಸನ್ಯಾಸ್ಯ ವೀರೇಂದ್ರಪಾಟೀಲರು ಬಂದಮೇಲೆ ರದ್ದು ಮಾಡಿದ್ದರು. ಅದನ್ನು ಮತ್ತೆ ಡೀ ನೋಟಿಫೈ ಮಾಡುವುದಕ್ಕೋಸ್ಕರ ಆಜ್ಞೆ ಮಾಡಿದ್ದಾರೆ ಎಂದು ಹೇಳಿದೆ. ಅದಕ್ಕೆ ಸಂಬಂಧಪಟ್ಟಂತೆ ನೀವು ಉತ್ತರ ಕೊಟ್ಟಿದ್ದೀರಿ. ಅದು ಏನು ಎಂದು ನನ್ನ ಹತ್ತಿರ ರೆಫರೆನ್ಸ್ ಇದೆ, ನಾನು ಕಳುಹಿಸುತ್ತೇನೆ. All the above lands were denotified during Sri Ramakrishna Hegd[illegible]

ಶ್ರೀ ಎಸ್. ಬಂಗಾರಪ್ಪ : ತಾವು ಮಾತನಾಡುವುದಕ್ಕೆ ನಾನು ಬೇಡ ಎಂದು ಹೇಳುವುದಿಲ್ಲ. ಹೆಚ್.ಯು.ಡಿ. ಇಲಾಖೆಯ ಡಿಮ್ಯಾಂಡ್ ಬಗ್ಗೆ ಚರ್ಚೆ ಇರುವುದರಿಂದ ಆಗ ತಾವು ಮಾತನಾಡಬಹುದು. ನಾನು ಏನು ಕ್ಲಾರಿಫಿಕೇಷನ್ ಕೊಡಬೇಕೋ ಅದನ್ನು ಕೊಟ್ಟಿದ್ದೇನೆ. ಈಗ ರೂಲ್ ಪ್ರಕಾರ ಡಿಸ್ಕಸ್ ಮಾಡುವುದಕ್ಕೆ ಬರುವುದಿಲ್ಲ. ನಾನು ಅವರ ಪರ್ಮಿಷನ್ ತೆಗೆದುಕೊಂಡು ಹೇಳಿದ್ದೇನೆ. ಹೆಚ್.ಯು.ಡಿ. ಡಿಮ್ಯಾಂಡ್ಸ್ ಮೇಲೆ ಭಾಗವಹಿಸಿ ಈ ಎಲ್ಲಾ ವಿವರಗಳನ್ನೂ ತಾವು ಹೇಳಬಹುದು. ಆಗ ಸರ್ಕಾರಕ್ಕೆ ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ. ರಿಟ್ ಪಿಟಿಷನ್ ನಂಬರನ್ನು, ನೋಟಿಫಿಕೇಷನ್ ವಿಚಾರವನ್ನು ನಾನು ಹೇಳಿದ್ದೇನೆ. We have not denotified as per that... ತಾವು ಇದರ ಬಗ್ಗೆ ಮಾತನಾಡಿ. ತಾವು ಈ ರೀತಿ ಕೇಳುತ್ತಾ ಹೋದರೆ ರೂಲ್ ಪ್ರಕಾರ ಇಲ್ಲಿ ಉತ್ತರಕೊಡುವುದಕ್ಕೆ ಬರುವುದಿಲ್ಲ. ಹೆಚ್.ಯು.ಡಿ. ಡಿಮ್ಯಾಂಡ್ ಬಂದಾಗ ತಾವು ಮಾತನಾಡಿ ಆಗ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನೂ ಅದನ್ನೇ ಹೇಳುತ್ತಿದ್ದೇನೆ. ಇವತ್ತು ತಾವು ಕೊಟ್ಟಿರತಕ್ಕ ಉತ್ತರದ ಬಗ್ಗೆ ಪ್ರಿವಿಲೇಜ್ ಮೂವ್ ಮಾಡುವ ದೃಷ್ಟಿಯಿಂದ ಈಗಾಗಲೇ ಮಾನ್ಯ ಅಧ್ಯಕ್ಷರಿಗೆ ಅದನ್ನು ನಾನು ಕಳುಹಿಸಿಕೊಟ್ಟಿದ್ದೇನೆ. ಆದರೂ ಮತ್ತೆ ತಮ್ಮ ಗಮನಕ್ಕೆ ಇದನ್ನು ತರುತ್ತಿದ್ದೇನೆ. ಬಿ.ಡಿ.ಎ. ನವರು ಯಾವುದೇ ಸಂದರ್ಭದಲ್ಲಿ ಡೀ ನೋಟಿಫೈ ಮಾಡುವುದಕ್ಕೆ ಆದೇಶ ಕೊಟ್ಟಿಲ್ಲವೆಂದು ಹೇಳಿದಾಗ ಇಂಥಿಂಥ ಇಂಡಿವಿಜುಯಲ್ಸ್‌ಗೆ ಜಮೀನನ್ನೂ ಕೊಟ್ಟಿದ್ದೀರಿ ಎನ್ನತಕ್ಕ ವಿವರಗಳನ್ನು ನಾನು ಕೊಟ್ಟಿದ್ದೇನೆ. ಸರ್ಕಾರದ ಟಿಪ್ಪಣಿಯನ್ನೂ ಕೂಡ ತಮಗೆ ಕಳುಹಿಸಿಕೊಡುತ್ತೇನೆ. ಅದರ ಕಾಪಿಯನ್ನೂ ತಮಗೆ ಕಳುಹಿಸಿಕೊಡುತ್ತೇನೆ. All the above lands were denotified during Sri Ramakrishna Hegde's period but during Sri Veerendra Patil's period all the above denotifications were cancelled. But now, Sri S.M. Patnaik, Secretary, Housing and Urban Development Department directed the BDA us send favourable reply...

ಉಪಾಧ್ಯಕ್ಷಿಣಿಯವರು : ಯಡಿಯೂರಪ್ಪನವರೆ, ತಮ್ಮ ಹತ್ತಿರ ಏನೇನು ಪತ್ರಗಳಿವೆ, ಏನೇನು ದಾಖಲೆಗಳಿವೆ ಅವುಗಳನ್ನೆಲ್ಲಾ ಮಾನ್ಯ ಮುಖ್ಯ ಮಂತ್ರಿಗಳಿಗೆ ಮತ್ತು ಅಧ್ಯಕ್ಷರಿಗೆ ಕಳುಹಿಸಿಕೊಡಿ.

ಶ್ರೀ ಪಿ.ಎಸ್. ರಾಣೆ : ಮಾನ್ಯ ಅಧ್ಯಕ್ಷಿಣಿಯವರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ವಿರೋಧಪಕ್ಷದ ಸದಸ್ಯರಾದ ಮಾನ್ಯ ಯಡಿಯೂರಪ್ಪನವರು ಮೇಲಿಂದಮೇಲೆ ಏನು ಪ್ರಸ್ತಾಪ ಮಾಡುತ್ತಿದ್ದಾರೆಂದರೆ, ಮೋಹನ್ ಮೆಕೆನ್ಸ್ ಕಂಪೆನಿಗೆ 20 ಎಕರೆಗಿಂತ ಹೆಚ್ಚಿನ ಜಮೀನನ್ನು ಡೀ ನೋಟಿಫೈ ಮಾಡುವಾಗ ಎಲ್ಲಾ ಕಾನೂನುಗಳನ್ನೂ ಮೀರಿ ಕೊಡುತ್ತಿದ್ದೀರಿ ಎಂದು. ಮಾನ್ಯ ಸದಸ್ಯರು ಮತ್ತೆ ಮತ್ತೆ ಅದನ್ನೇ ಪ್ರಸ್ತಾವ ಮಾಡುತ್ತಿದ್ದಾರೆ. ಹಿಂದೆ ಮಾನ್ಯ ರಾಮಕೃಷ್ಣ ಹೆಗಡೆಯವರು ಕೊಡಲಿಲ್ಲ. ಮಾನ್ಯ ಬೊಮ್ಮಾಯಿಯವರು ಕೊಡಲಿಲ್ಲ. ಮಾನ್ಯ ವೀರೇಂದ್ರ ಪಾಟೀಲರು ಕೊಡಲಿಲ್ಲ. ಸುಪ್ರೀಂ ಕೋರ್ಟ್‌ನಲ್ಲಿಯೂ ಕೂಡ ಅದು ಬಿದ್ದು ಹೋಯಿತು. ಇಷ್ಟೆಲ್ಲಾ ಆದರೂ ಕೂಡ ನಾವು ಕೊಟ್ಟಿದ್ದೇವೆ ಎಂದರೆ ನೀವು ನಮ್ಮ ಈ ಧೈರ್ಯವನ್ನು ಮೆಚ್ಚಬೇಕು. ಇದನ್ನು ಬಿಟ್ಟು ಮತ್ತೆ ಮತ್ತೆ ಆಕ್ಷೇಪ ಮಾಡುವುದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಅದನ್ನು ಹೇಳುತ್ತಿಲ್ಲ. ವಿವರಕ್ಕೆ ನಾನು ಹೋಗುವುದಿಲ್ಲ. ಹೈಕೋರ್ಟ್, ಸುಪ್ರೀಂ ಕೋರ್ಟ್‌ನಲ್ಲಿ ಸರ್ಕಾರವೇ ವಾದ ಮಾಡಿ ಡೀನೋಟಿಫೈ ಮಾಡಿಸಕೂಡದು.

ಉಪಾಧ್ಯಕ್ಷಿಣಿಯವರು : ಡಿಸ್ಕಷನ್‌ಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹೈಕೋರ್ಟ್ ಆದೇಶದ ಪ್ರಕಾರ ಮೋಹನ್ ಮೆಕೆನ್ಸ್ ಕಂಪೆನಿಗೆ ಜಮೀನನ್ನು ಮಂಜೂರು ಮಾಡಿದೆ ಎಂದು ತಾವೇ ಹೇಳಿದ್ದೀರಿ. ಈಗ ಇದಕ್ಕೆ ತಾವು ಬದ್ಧವಾಗಿದ್ದೀರೋ, ಇಲ್ಲವೋ? ಅಷ್ಟು ಮಾತ್ರ ನಾನು ಕೇಳುತ್ತಿದ್ದೇನೆ. ರಾಜ್ಯದ ಜನರಿಗೆ ಇಷ್ಟುಮಾತ್ರ ಗೊತ್ತಾಗಬೇಕು. ಇದಕ್ಕೆ ಎಸ್ ಅಥವಾ ನೋ ಎಂದು ಏನು ಹೇಳುತ್ತೀರೋ ಹೇಳಿ?

MADAM DEPUTY SPEAKER : He has made a statement. You cannot have a discussion on this..

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಾರೋ ನೋಡೋಣ.

ಶ್ರೀ ಎಂ. ವೀರಪ್ಪಮೋಯಿಲಿ : ಮಾನ್ಯ ಉಪಾಧ್ಯಕ್ಷಿಣಿಯವರೆ, ನಮ್ಮನಿಯಮದ ಪ್ರಕಾರ ಈ ಸದನ ನಡೆಯುತ್ತಿಲ್ಲ. I am very sorry to say this ಏಕೆಂದರೆ ಈಗ ಜೀರೋ ಅವರ್ ಇರಲಿಲ್ಲ. ಮತ್ತೆ ಜೀರೋ ಅವರ್ ರಿವೈವ್ ಆಗುತ್ತಿದೆ. ಪುನಃ ಅದೇ ವ್ಯಾಕ್ಯೂಂನಲ್ಲಿ ನಾವು ಕೆಲಸಮಾಡುತ್ತಿದ್ದೇವೆ. ಇದರಲ್ಲಿ ಒಂದು ಹೇಳಿಕೆ ಕೊಟ್ಟಿದೆ. ಅವರು ಪ್ರಿವಿಲೇಜ್ ಮೋಷನ್‌ನ್ನು ಕೊಟ್ಟಿದ್ದರೆ ಆ ಸಂದರ್ಭ ಬಂದಾಗ ಅವರು ಅದನ್ನು ಎತ್ತಬಹುದು. ಇವತ್ತು ಹೆಚ್.ಯು.ಡಿ. ಬಗ್ಗೆ ಡಿಮ್ಯಾಂಡ್ ಸಭೆಯ ಮುಂದೆ ಚರ್ಚೆಗೆ ಬರುತ್ತದೆ. ಆಗ ಕೂಡ ಮಾತನಾಡುವುದಕ್ಕೆ ಅವಕಾಶ ಇದೆ. ಅದು ಬಿಟ್ಟು ಒಂದೇ ಸಮನೆ ಇವರು ಎದ್ದು ನಿಂತು ಎಲ್ಲಾ ಸಂದರ್ಭದಲ್ಲೂ, ಎಲ್ಲಾ ವಿಚಾರಗಳನ್ನೂ ಎತ್ತುವುದಾದರೆ ನಾವು ಒಂದು ಯುನಾನಿಮಸ್ ರೆಸಲ್ಯೂಷನ್‌ನ್ನು ತೆಗೆದುಕೊಂಡು ನಾವು ಮಾಡಿದಂಥ ನಿಯಮಗಳನ್ನು ಸಂಪೂರ್ಣವಾಗಿ ಬದಿಗಿಟ್ಟು ನಮಗೆ ಯಾವಾಗ ಮನಸ್ಸು ಬರುತ್ತದೆ. ಆಗ ಯಾವ ವಿಚಾರಗಳನ್ನೂ ಬೇಕಾದರೂ ಎತ್ತಬಹುದೆಂದು ತಾವು ಒಂದು ನಿರ್ಣಯವನ್ನು ಮಾಡಿಧರೆ ಅದರ ಪ್ರಕಾರ ನಾವು ಎತ್ತೋಣ. ಇವತ್ತಿಗೆ 2 ವಾರವಾಯಿತು ಈ ಅಧಿವೇಶನ ಪ್ರಾರಂಭವಾಗಿ. ಇದುವರೆಗೂ ನಾವು ಒಂದು ಡಿಮ್ಯಾಂಡನ್ನೂ ಕೂಡ ಸರಿಯಾಗಿ ಪಾಸ್ ಮಾಡಿಲ್ಲ. ಒಂದು ಲವಲೇಶವೂ ಕೂಡ ಸಾರ್ವಜನಿಕವಾಗಿ ಪ್ರಮುಖ ಬೇಡಿಕೆಗಳ ವಿಚಾರ ಚರ್ಚೆಯಾಗಿಲ್ಲ. ನಾವು ಜನರಿಗೆ ಏನು ಉತ್ತರವನ್ನು ಕೊಡಬೇಕು? ಇವತ್ತು ಎಲ್ಲಾ ಸಂದರ್ಭದಲ್ಲೂ ಕೂಡ ಬರೀ ಅಧಿಕಾರೇತರರ ವಿಚಾರಗಳನ್ನೇ ಇಲ್ಲಿ ಎತ್ತುತ್ತಿದ್ದರೆ ನಾವು ಜವಾಬ್ದಾರಿಯಿಂದ ಈ ಸದನದಲ್ಲಿ ಕೆಲಸಮಾಡಲಿಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ತಾವು ನಿಯಮವನ್ನು ಪಾಲಿಸಬೇಕು. ಇಲ್ಲದೇ ಹೋದರೆ we are accountable to it. Is that the sense of the House to take up any issue at any time. If it so, it is for them to decide.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯ ಮಂತ್ರಿಗಳು ಕ್ಲಾರಿಫಿಕೇಶನ್ ಕೊಟ್ಟಂಥ ಸಂದರ್ಭದಲ್ಲಿ..

(ಗೊಂದಲ)

ಉಪಾಧ್ಯಕ್ಷಿಣಿಯವರು : ಈಗ ಹೆಚ್.ಎಂ. ರೇವಣ್ಣನವರು..

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಕಾನೂನು ಚೌಕಟ್ಟಿನಲ್ಲೇ ಹೋಗುತ್ತೇನೆಂದು ಮಾನ್ಯ ಸದನದ ನಾಯಕರು ಹೇಳಿದರೆ ಆಗಬಹುದು.

ಉಪಾಧ್ಯಕ್ಷಿಣಿಯವರು : ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಯಡಿಯೂರಪ್ಪನವರೇ ನಾನು ವಿವರಗಳನ್ನೆಲ್ಲಾ ಕೊಟ್ಟಿದ್ದೇನೆ. ಈ ವಿವರಣೆಯಲ್ಲಿ ಮತ್ತೆ ಏನಾದರೂ ಅನುಮಾನವಿದ್ದರೆ ಹೆಚ್.ಯು.ಡಿ. ಡಿಮ್ಯಾಂಡ್ ಮೇಲೆ ಡಿಸ್‌ಕಷನ್ ಇದೆ. ಆ ಸಂದರ್ಭದಲ್ಲಿ ಪ್ರಸ್ತಾಪ ಮಾಡತಕ್ಕಂಥ ಹಕ್ಕು ತಮಗೆ ಇದೆ. ಅದನ್ನು ತಾವು ಮಾಡಬಹುದು. ಅದು ನಿಮಗೆ ಬಿಟ್ಟಿರತಕ್ಕಂಥ ವಿಚಾರ. ಆಗ ವಿವರವಾಗಿ ಉತ್ತರವನ್ನು ಕೊಡುವುದಕ್ಕೆ ಬರುತ್ತದೆಂದು ನಿಮಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ ಹೈಕೋರ್ಟ್ ಆದೇಶದ ಪ್ರಕಾರ ಜಮೀನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇಡೀ ರಾಜ್ಯದ ಜನತೆ ಇದನ್ನು ಓದಿದ್ದಾರೆ. ನೀವು ಹೈಕೋರ್ಟ್ ಡೈರೆಕ್ಷನ್ ಪ್ರಕಾರ ಕೊಟ್ಟಿದ್ದಿರೋ ಇಲ್ಲವೋ ಅದನ್ನು ನಮ್ಮ ರಾಜ್ಯದ ಜನತೆ ತಿಳಿದುಕೊಳ್ಳತಕ್ಕಂಥದ್ದು ಅಗತ್ಯವಿದೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಪತಿಯವರೇ ಶ್ರೀಮಾನ್ ರಾಣೆಯವರು ಏನೋ ಒಂದು ವಿಚಾರ ಹೇಳಿರತಕ್ಕಂಥದ್ದು ಅದು ರೆಕಾರ್ಡಿಗೆ ಹೋಗಿಬಿಟ್ಟಿದೆ. ದಯವಿಟ್ಟು ಒಂದು ವಿಚಾರವನ್ನು ಅವರು ತಿಳಿದುಕೊಳ್ಳಬೇಕು. ಡೀನೋಟಿಫೈ ಮಾಡಿಲ್ಲ ಎನ್ನತಕ್ಕಂಥ ಮಾತನ್ನು ಪದೇ ಪದೇ ನಾನು ಹೇಳುತ್ತಿದ್ದೇನೆ. ಯಾರೋ ಮಾನ್ಯ ರಾಮಕೃಷ್ಣ ಹೆಗಡೆಯವರು ಮಾಡಲಿಲ್ಲ ಈಗ ನಾವು ಮಾಡಿದ್ದೇವೆ ನಮ್ಮ ಧೈರ್ಯವನ್ನು ಮೆಚ್ಚಬೇಕು ಎನ್ನತಕ್ಕಂಥ ಮಾತನ್ನು ಮಾನ್ಯ ರಾಣೆಯವರು ಹೇಳಿರತಕ್ಕಂಥದ್ದು ಈಗ ರೆಕಾರ್ಡ್‌ಗೆ ಹೋಗಿಬಿಟ್ಟಿದೆ. ಈ ವಿಷಯದಲ್ಲಿ ನಾನು ಸ್ಪಷ್ಟಪಡಿಸುತ್ತೇನೆ. ಡೀನೋಟಿಫೈ ನಾವು ಮಾಡಿಲ್ಲವೆನ್ನತಕ್ಕಂಥ ಮಾತನ್ನು ಹೇಳಿದಮೇಲೆ ಮತ್ತೆ ಮೊಗಂ ಆಗಿ ಧೈರ್ಯ ಮೆಚ್ಚಬೇಕೆಂದರೆ ಅರ್ಥವಿದೆಯೇ ಇಲ್ಲಿ ಮೂಲ ಪ್ರಶ್ನೆ ಅವಶ್ಯಕವಾಗಿ ಮಾನ್ಯ ಸದಸ್ಯರು ಯಾರೇ ಇರಬಹುದು, ಅವರು ಈ ಕೃತ್ಯವನ್ನು ಈಚೆಗೆ ಎಳೆಯತಕ್ಕಂಥದ್ದಲ್ಲ. ಅವರಿಗೆ ಗೌರವತರಬೇಕಾದ ಮಾತನಾಡಬೇಕಾದರೆ ಇದು ಒಳ್ಳೆಯದಲ್ಲ. ಡೀನೋಟಿಫೈ ಮಾಡಿದ್ದಾರೆ, ಮೆಚ್ಚಬೇಕೆನ್ನತಕ್ಕಂಥ ಮಾತನಾಡಿದರೆ, ಸ್ವಲ್ಪ ಸ್ವಡಿಮಾಡಿ ಮಾತನಾಡುವುದನ್ನು ಕಲಿತರೆ ಶೋಭೆ. ಇಲ್ಲದಿದ್ದರೆ ಅವರು ಈ ರೀತಿ ಮಾತನಾಡತಕ್ಕಂಥದ್ದನ್ನು ನಿಲ್ಲಿಸತಕ್ಕಂಥದ್ದು ಬಹಳ ಒಳ್ಳೆಯದು.

(ಗೊಂದಲ)

334ನೇ ನಿಯಮದ ಮೇರೆಗೆ

ಮಾಗಡಿ ತಾಲ್ಲೂಕು ಮಾಡಬಾಳ ಹೋಬಳಿಯಲ್ಲಿ ಕೆಲವರು ಸರ್ಕಾರ ವಶಪಡಿಸಿಕೊಂಡಿರುವ ಜಮೀನಿನಲ್ಲಿ ಗುಡಿಸಲು ಕಟ್ಟಿರುವುದನ್ನು ತೆಗೆಸಲು ಸರ್ಕಾರದ ಕ್ರಮ

ಶ್ರೀ ಹೆಚ್.ಎಂ. ರೇವಣ್ಣ : ಮಾನ್ಯ ಅಧ್ಯಕ್ಷರೇ ಮಾಗಡಿ ತಾಲ್ಲೂಕು ಮಾಡಬಾಳ್ ಹೋಬಳಿಯಲ್ಲಿ ಮಂಚನಬೆಲೆ ನೀರಾವರಿ ಯೋಜನೆಯ ನಡೆಯುತ್ತಿದ್ದು ಅಲ್ಲಿನ ರೈತರಿಗಾಗಿ ಪುನರ್ವಸತಿ ಮಾಡಲು ಹಲವು ಕಾರ್ಯಕ್ರಮ ಹಾಕಿಕೊಂಡಿದ್ದು ಇನ್ನೂ ಪೂರ್ಣಗೊಂಡಿಲ್ಲದಿರುವುದು ಹಾಗೂ ಅಲ್ಲಿನ ಕೆಲವರು ಸರ್ಕಾರ ವಶಪಡಿಸಿಕೊಂಡಿರುವ ಜಮೀನಿನಲ್ಲಿ ಗುಡಿಸಲುಗಳನ್ನು ಹಾಕಲು ಮುಂದಾಗಿದ್ದು ಅವುಗಳು